ನಮಗೂ ಪಾಲುಕೊಡಿ ಅಂತ ಕೇಳೋಕೆ ಶುರು ಮಾಡ್ತಿದ್ದಾರೆ. ಅವಳು ಆಸ್ತಿಯಲ್ಲಿ ಪಾಲು ಕೇಳೋದರಲ್ಲಿ ನ್ಯಾಯ ಇದೆ. ಗಂಡನದ್ದು ಪಿತ್ರಾರ್ಜಿತ ಆಸ್ತಿ. ಮಗ ಮನೆಗೆ ಬಂದ ಮೇಲೆ ಆಸ್ತಿ ಹಂಚಿಕೊಡ್ತೀನಿ ಅಂತ ಅವರಿಗೆ ಹೇಳಿದ್ದೀನಿ. ಈಗ ಏನು ಮಾಡಬೇಕು ಅಂತ ಗೊತ್ತಾಗ್ತ ಇಲ್ಲ ಸರ್.

ನಿಮಗೆ ಈ ಪತ್ರ ಬರೆದು ತೊಂದರೆ ಕೊಡ್ತ ಇದ್ದೀನಿ. ಈ ಸಮಸ್ಯೆಗಳಿಂದ ಹೊರಬರೋ ದಾರಿಗಳು ಕಾಣ್ತ ಇಲ್ಲ. ಅಜಯನ ಫೋಟೊದ ಎರಡು ಕಾಪಿಗಳನ್ನು ಕಳಿಸಿದ್ದೇನೆ. ಏನಾದರೂ ಮಾಡಿ ಅವನನ್ನು ಹುಡುಕಿಸಿಕೊಡಿ. ಅವನು ಮನೆಗೆ ಬರಲ್ಲ ಅಂದರೆ ಅವರಪ್ಪ ಸತ್ತಿರುವ ವಿಷಯ ತಿಳಿಸಿ, ಖಂಡಿತಾ ಬರ್ತಾನೆ.

ಪತ್ರ ಓದುತ್ತಲೇ ಪ್ರೊಫೆಸರ್ ಕಣ್ಣುಗಳು ನೀರಿನಿಂದ ತುಂಬಿದವು. ಇಳಿಯಬೇಕಿದ್ದ ಸ್ಟಾಪು ಬಂದದ್ದೂ ಅವರಿಗೆ ಗೊತ್ತಾಗಲಿಲ್ಲ. ಕಂಡಕ್ಟರನೇ ಹತ್ತಿರಕ್ಕೆ ಬಂದು ಎಚ್ಚರಿಸಿದ ಮೇಲೆ ಬಸ್ಸಿಂದ ಇಳಿದರು. ಸಾವರಿಸಿಕೊಂಡರೂ ನೆಲವೇ ಕುಸಿಯುತ್ತಿದೆ ಎನ್ನುವ ಅನುಭವ ಆಯಿತು. ಕಣ್ಣಲ್ಲಿ ನೀರು ತುಂಬಿಕೊಂಡು ಎದುರಿನ ರಸ್ತೆ, ಮನೆಗಳೆಲ್ಲ ಕಲಸಿಹೋದಂತೆ ಕಾಣಿಸಿದವು.

ಇಡೀ ರಾತ್ರಿ ಮಾಧವಿಯ ದೀನ ಮುಖವೇ ಅವರ ಕಣ್ಣಮುಂದೆ ಬರುತ್ತಿತ್ತು. ಕಷ್ಟದ ಸಮಯದಲ್ಲಿ ಮಾಧವಿ ಜತೆ ಅವಳ ಮಗ ಇರಬೇಕಿತ್ತು. ಈಗಲೂ ಅವನು ಮನೆಗೆ ಬಾರದೇ ಹೋದರೆ, ಅವಳು ಇನ್ನಷ್ಟು ಕಷ್ಟಕ್ಕೆ ಸಿಕ್ಕಿಕೊಳ್ತಾಳೆ ಅನ್ನಿಸತೊಡಗಿತು.

★★★

ಮಾಧವಿಗೆ ಫೋನ್ ಮಾಡಿ ಸಮಾಧಾನದ ನಾಲ್ಕು ಮಾತು ಹೇಳೋಣವೆಂದರೆ ಅವಳ ನಂಬರ್ ಇಲ್ಲ. ಪತ್ರ ಬರೆಯೋಣವೆಂದರೆ ವಿಳಾಸವೂ ಇಲ್ಲ. ಕೊಡಗಲ್ಲಿ ಎಲ್ಲಿದ್ದಾಳೆ ಅನ್ನೋ ಸರಿಯಾದ ವಿಳಾಸವೂ ಇಲ್ಲ.

ಹದಿನೈದು ದಿನ ರಜೆ ಹಾಕಿ ತಾವೇ ಖುದ್ದಾಗಿ ರಾಯಲಸೀಮೆಗೆ ಹೋಗಿ ಬರುವುದೇ ಸರಿ ಅಂತ ಆ ಕ್ಷಣದಲ್ಲಿ ಅನ್ನಿಸಿತು. ಮೂರು ತಿಂಗಳ ಹಿಂದೆ ಮಾಧವಿ ಬಂದು ಭೇಟಿ ಆಗದೇ ಇದ್ದರೆ ಅವಳ ಜೀವನದ ದುರಂತಗಳೆಲ್ಲ ಗೊತ್ತೇ ಆಗ್ತಾ ಇರಲಿಲ್ಲ. ಈಗ ಅವಳಿಗೆ ಮಗನ ಆಸರೆ ಬೇಕು. ಕಾನೂನಿನ ಮಾರ್ಗದರ್ಶನ ಬೇಕು. ಮಗ ಜತೆಯಲ್ಲಿದ್ದರೆ ಅವಳಿಗೆ ಎಲ್ಲವನ್ನೂ ಎದುರಿಸುವ ಧೈರ್ಯ ಬರುತ್ತೆ ಅನ್ನಿಸಿತು.

ಮಗನನ್ನು ಹುಡುಕಿಕೊಡಿ ಅಂತ ಮಾಧವಿ ಮುಖ ಮುಚ್ಚಿಕೊಂಡು ಬಿಕ್ಕಳಿಸುತ್ತ ಎದುರಿಗೆ ಕೂತಿದ್ದ ದೃಶ್ಯ ಪದೇ ಪದೇ ಅವರ ಮನಸ್ಸಿನಲ್ಲಿ ಸುಳಿಯಿತು. ಎರಡು ದಿನ ಅವರಿಗೆ ನಿದ್ದೆ ಬರಲಿಲ್ಲ. ಮಗ್ಗಲು ಬದಲಿಸುತ್ತಲೇ ರಾತ್ರಿ ಕಳೆದರು. ಅಜಯ್‌ನನ್ನು ಎಲ್ಲಿ ಅಂತ ಹುಡುಕೋದು? ಯಾರನ್ನು ಕಳಿಸಿ ಹುಡುಕಿಸೋದು? ಅವನು ಸಿಕ್ಕರೆ ಸರಿ. ಇಲ್ಲವಾದರೆ ಮಾಧವಿ ಗತಿ ಏನು? ಅವಳ ಕಷ್ಟಗಳು ಜಾಸ್ತಿ ಆಗ್ತವೆ... ಹೀಗೆ ಏನೇನೊ ಅವರವೇ ಪ್ರಶ್ನೆಗಳು, ಉತ್ತರಗಳು.

ಅಜಯನ ಹಾಗೆ ನಾನೂ ಸಮಾನತೆ ಇರುವ ಸಮಾಜ ನಿರ್ಮಾಣದ ಹುಚ್ಚು ಹಿಡಿಸಿಕೊಂಡು ಹದಿನಾರನೇ ವಯಸ್ಸಿನಲ್ಲಿ ಮನೆ ಬಿಟ್ಟು, ಊರೂರು ಅಲೆದವನಲ್ಲವೇ. ಹಳೆಯ ದಿನಗಳು ಒಂದೊಂದೇ ಅವರಿಗೆ ನೆನಪಾದವು. ಈ ಭೂಮಿ, ನೀರು, ಗಾಳಿ ಎಲ್ಲರದು. ಅದರ ಮೇಲೆ ಎಲ್ಲರಿಗೂ ಹಕ್ಕಿದೆ. ಎಲ್ಲರಿಗೂ ಪಾಲು ಇದೆ ಅಂತ ಯಾರೋ ಕವಿ ಬರೆದ ಹಾಡಿನ ಸಾಲುಗಳನ್ನು ಗಟ್ಟಿಯಾಗಿ ಹಾಡಿಕೊಂಡು ಓಡಾಡಿ, ಕೂಗಾಡಿದವನೇ ಅಲ್ಲವೇ?

ಆ ದಿನಗಳೇ ಚೆನ್ನಾಗಿದ್ದವು ಅಂತ ಎಷ್ಟೋ ಸಲ ಅವರಿಗೆ ಅನ್ನಿಸಿದ್ದಿದೆ. ಸಂಘಟನೆಯ ಕಾರ್ಯಕರ್ತರ ಜತೆ ಮೆರವಣಿಗೆಯಲ್ಲಿ ಕ್ರಾಂತಿ ಗೀತೆಗಳನ್ನು ಹಾಡೋದು. ಸಂಜೆ ಪಾರ್ಟಿ ಆಫೀಸಿನಲ್ಲಿ ಹಿರಿಯ ಕಾಮ್ರೇಡ್‌ಗಳ ಅನುಭವಗಳನ್ನು ಕೇಳೋದು. ಅಲ್ಲೇ ನೆಲದ ಮೇಲೆ ಪೇಪರ್ ಹಾಸಿಕೊಂಡು ಮಲಗಿ